ಟೈಮ್ಸ್ ಆಫ್ ಕರ್ನಾಟಕ

**Saturday 09th November 2024**

# RVCE: Emphasis on skill development along with education: Prof. S.S. Iyengar

ಸುವರ್ಣ ಟೈಮ್ಸ್ ಆಫ್ ಕರ್ನಾಟಕ ಶನಿವಾರ, 09 ನವೆಂಬರ್ 2024

## ಶಿಕ್ಷಣದ ಜೊತೆ ಕೌಶಲ್ಯಾಭಿವೃದ್ಧಿಗೆ ಒತ್ತು ನೀಡಿ: ಪ್ರೊ.ಎಸ್.ಎಸ್.ಅಯ್ಯಂಗಾರ್




**ಕೆಂಗೇರಿ:** ಸಮೀಪದ ಆರ್.ವಿ.ಸಿ.ಇ ಕಾಲೇಜಿನ ಐಇಎಂ ಸಭಾಂಗಣದಲ್ಲಿ "8ನೇ ಐಇಇಇ ಅಂತರರಾಷ್ಟ್ರೀಯ ಸಮ್ಮೇಳನ ಸಿಎಸ್ಐಟಿಎಸ್ಎಸ್–2024" ಕಾರ್ಯಕ್ರಮವು ಇದೇ ತಿಂಗಳ 7 ರಿಂದ 9ರ ವರೆಗು ಆಯೋಜಿಸಿದ್ದು, ಶುಕ್ರವಾರ ದಂದು ಹೊತ್ತಿಗೆ ಪ್ರದರ್ಶಿಸಿ ಸಹಿ ಮಾಡಲಾದ ಒಡಂಬಡಿಕೆ ಪತ್ರ ಹಸ್ತಾಂತರಿಸಲಾಯಿತು.

ಅಮೆರಿಕದ ಮಯಾಮಿಯಲ್ಲಿನ ಸ್ಕೂಲ್ ಆಫ್ ಕಂಪ್ಯೂಟಿಂಗ್ ಮತ್ತು ಮಾಹಿತಿ ವಿಜ್ಞಾನ ಫ್ಲೋರಿಡಾ ಅಂತರಾಷ್ಟ್ರೀಯ ವಿಶ್ವವಿದ್ಯಾಲಯದ ನಿರ್ದೇಶಕ ಪ್ರೊ.ಎಸ್.ಎಸ್.ಅಯ್ಯಂಗಾರ್ ಅವರು ಕಂಪ್ಯೂಟೇಶನಲ್ ಸಿಸ್ಟಮ್ಸ್ ಮತ್ತು ಮಾಹಿತಿ ತಂತ್ರಜ್ಞಾನ, ಸುಸ್ಥಿರ ಪರಿಹಾರ ಕುರಿತ ಸಮ್ಮೇಳನದ ಉದ್ಘಾಟನೆ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರೊ. ಎಸ್.ಎಸ್.ಅಯ್ಯಂಗಾರ್, ದೇಶಾದ್ಯಂತ ಹಲವು ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿದ್ದೇನೆ, ಆರ್.ವಿ. ಸಿ.ಇ ಶಿಕ್ಷಣ ಸಂಸ್ಥೆಯ ನುರಿತ ಪ್ರಾಧ್ಯಾಪಕರು ಗುಣಮಟ್ಟದ ಭೋಧನೆ ವಿದ್ಯಾರ್ಥಿಗಳಿಗೆ ಒದಗಿಸುತ್ತಿದ್ದಾರೆ, ಎಂತಹ ಕಾಲೇಜಲ್ಲಿ ಪ್ರವೇಶ ಪಡೆದಿದ್ದೇನೆ, ಬೋಧಕರು ಎಂತಹ ವಿಷಯಗಳಲ್ಲಿ ಎಷ್ಟು ಪರಿಣಿತಿ ಹೊಂದಿದ್ದಾರೆ, ಶಿಕ್ಷಣ ಹೊರತುಪಡಿಸಿ ಕೌಶಲ್ಯಾಭಿವೃದ್ಧಿ ಕಲಿಕೆಗೆ ಒತ್ತು ನೀಡುತ್ತಿದ್ದಾರೆಯೇ ಎನ್ನುವುದನ್ನು ಅರಿತಾಗ ವಿದ್ಯಾರ್ಥಿಗಳ ಭವಿಷ್ಯ ನಿರ್ಧಾರವಾಗಲಿದೆ ಎಂದು ಪ್ರೊ.ಎಸ್.ಎಸ್. ಅಯ್ಯಂಗಾರ್ ಹೇಳಿದರು.

ಸಿಯಾಟಲ್ ನ ಮೈಲಾಹ್ ಸಹಸಂಸ್ಥಾಪಕಿ ಚೈತ್ರಾ ವೆದುಲ್ಲಪಲ್ಲಿ, ಡಾರ್ಟ್ಮಂಡ್ ನ ಯುನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್ ಮತ್ತು ಆರ್ಟ್ಸ್ ಕಾಲೇಜಿನ ಪ್ರೊ.ಡಾ.ಇಂಗ್ ವಿನೋದ್ ರಾಜಮಣಿ, ಐಇಇಇ ಬೆಂಗಳೂರು ವಿಭಾಗದ ಡಾ.ಟಿ.ಶ್ರೀನಿವಾಸ್, ಆರ್.ಎಸ್.ಎಸ್.ಟಿ ಅಧ್ಯಕ್ಷ ಡಾ.ಎಂ.ಪಿ.ಶ್ಯಾಮ್, ಪ್ರಾಂಶುಪಾಲ ಡಾ.ಕೆ.ಎನ್.ಸುಬ್ರಮಣ್ಯ, ಉಪ ಪ್ರಾಂಶುಪಾಲೆ ಡಾ.ಗೀತಾ, ಹೆಚ್.ಒ.ಡಿ ಡಾ.ಎಂ.ಕೃಷ್ಣ, ಇತರರು ಉಪಸ್ಥಿತರಿದ್ದರು.